ಚಿಂತೆಗಳು ಅಲೆಮಾಲೆಗಳನ್ನು ರಚಿಸುತ್ತಿದ್ದವು. ಮಧ್ಯಾಹ್ನವಾಯಿತು. ಎಂಜಲೆಲೆಗಳು ಆಗಲೂ ಹೊಂಡಕ್ಕೆ ಬಿದ್ದವು... ಯಾರೂ ಒಂದು ಹಿಡಿಯನ್ನು ತೆಗೆದಿಟ್ಟು ಕೊಟ್ಟಿಲ್ಲ. ಅಡುಗೆಕೋಣೆಯಲ್ಲಿ ಉಳಿದ ಗಂಜಿ ನೀರನ್ನು ಕೆಲಸದಾಕೆ ಕೊಂಡೊಯ್ಯುವುದನ್ನು ರೋಸಿ ಕಂಡಳು.

ಎಂಜಲೆಲೆಗಳು ಇರುವ ಹೊಂಡದ ಸುತ್ತಲೂ ತುಂಬಾ ಹೊತ್ತು ಪ್ರದಕ್ಷಿಣೆ ಹಾಕಿ ಬಂದಳು. ಹೊಂಡ ಇಳಿದರೆ ಹಸಿವು ನೀಗಲು ಏನಾದರೂ ಸಿಗಬಹುದು. ಆದರೆ, ಮೇಲೆ ಬರಲು ದಾರಿಯಿಲ್ಲ.

ಹಸಿವು... ಮನಸ್ಸಿನಲ್ಲಿ ಮನುಷ್ಯರ ಕುರಿತಾದ ದ್ವೇಷ ಹೆಚ್ಚಾಗುತ್ತಿದೆ!...

ಎರಡನೆಯ ಮಹಡಿಯಿಂದ ರೇಡಿಯೊ ಸಂಗೀತ ಹರಿದು ಬರುತ್ತಿದೆ... ಯಾರೂ ಹೊರಗೆ ಕಾಣಿಸುತ್ತಿಲ್ಲ.

ಕೊಳವೆಯ ಚರಂಡಿ ನೀರಿನಲ್ಲಿ ರೋಸಿ ಮೂಗಿಟ್ಟು ನೋಡಿದಳು. ಗಂಜಿ ನೀರಿನ ಛಾಯೆಯೂ ಇಲ್ಲ. ಆದರೂ ಆ ಕೊಳಕು ನೀರನ್ನು ಹೊಟ್ಟೆತುಂಬಾ ಕುಡಿದು ರೋಸಿ ಮನೆಯ ಸುತ್ತಲೂ ನಡೆದಳು...

ಮನೆಯ ಮುಂಭಾಗದಲ್ಲಿ ಯಜಮಾನನ ಪುಟ್ಟ ಹೂದೋಟವಿದೆ. ಅದರ ಸುತ್ತಲೂ ಬಲವಾದ ತಂತಿಬೇಲಿಯಿದೆ. ಕೆಲಸದ ಹುಡುಗಿ ಮನೆಯವರ ಸೀರೆ, ಲಂಗ ಮೊದಲಾದುವುಗಳನ್ನು 'ಲಕ್ಸ್‌ವಾಶ್' ಮಾಡಿ ಅದರ ಮೇಲೆ ಒಣಹಾಕಿದ್ದಾಳೆ. ಅದರ ಹತ್ತಿರ ಹೋದಾಗ ರೋಸಿಗೆ ಹೊಸದೊಂದು ಆಲೋಚನೆ ಹೊಳೆಯಿತು.

ಅವಳು ಸುತ್ತಲೂ ನೋಡಿದಳು. ಒಬ್ಬರೇ ಒಬ್ಬರು ಮನುಷ್ಯರಿಲ್ಲ. ಕೊಳವೆ ನೀರಿನ ಕೊಳಚೆಯಲ್ಲಿ ಮೆಟ್ಟಿದ ಕಾಲುಗಳನ್ನು ನಸುನೀಲ ಬಣ್ಣದ ಒಂದು ಸಿಲ್ಕುಸೀರೆಯ ಮೇಲೆ ಇರಿಸಿ ಅದನ್ನು ಕಚ್ಚಿ ಹರಿದಳು. ಸುಖಕರವಾದ ಪರಿಮಳ... ಆ ಬಲಪ್ರಯೋಗದಲ್ಲಿ ತಂತಿಬೇಲಿಯೂ ರೋಸಿಗೆ ನೆರವಾಯಿತು. ಬಾಯಲ್ಲಿದ್ದ ಬಟ್ಟೆ ತುಂಡುಗಳನ್ನು ಕೆಳಗೆ ಹಾಕಿ ಮೂಗನ್ನು ಸೀಟಿ ಇನ್ನೇನು ಮಾಡುವುದೆಂದು ಆಲೋಚಿಸುತ್ತಿರುವಾಗ ಹೆಜ್ಜೆ ಸಪ್ಪಳ ಕೇಳಿಸಿತು. ರೋಸಿ ಹಿಂತಿರುಗಿ ನೋಡಿದಾಗ ಸ್ವಲ್ಪ ದೂರದಲ್ಲಿ ಕುಟ್ಟನಿದ್ದಾನೆ. ಹೊಡೆಯಲು ತಕ್ಕ ಸಮಯಕ್ಕೆ ಕಾಯುತ್ತ ನಿಂತಿದ್ದಾನೆ... ಕುಟ್ಟ ಹೊಡೆದ. ಆದರೆ, ಅದು ನೆಲಕ್ಕೆ ಬಿದ್ದ ಬಳಿಕ ರೋಸಿಯ ಕಾಲಿಗೆ ತಾಗಿತು. ನೋವಾದರೂ ಗಣಿಸಲಿಲ್ಲ. ಅವನು ಎರಡನೆಯ ಹೊಡೆತಕ್ಕೆ ಕಲ್ಲು ಹುಡುಕುತ್ತಿದ್ದಾನೆ... ಅವಳಿಗೆ ಸದಾ ಉಪದ್ರವ ಕೊಡುವುದರಲ್ಲೇ ಮನರಂಜನೆ ಪಡೆಯುವ ಆ ಪುಟ್ಟ ಮನುಷ್ಯನನ್ನು ಈ ಬಾರಿ ಬಿಡಬಾರದು ಎಂದು ಅವಳು ನಿರ್ಧರಿಸಿದಳು.

ಕುಟ್ಟನು ನೆಲದಲ್ಲಿ ಕುಳಿತು ಕಲ್ಲು ಆಯ್ದು ಹೆಕ್ಕುತ್ತಿರುವಾಗ ರೋಸಿ ಹತ್ತಿರಕ್ಕೆ ಬಂದುದು ಗೊತ್ತಾಗಲಿಲ್ಲ. ಆ ದರಿದ್ರ ನಾಯಿಗೂ ಮೋಸದಿಂದ ಕಡಿಯುವ ಬುದ್ಧಿ ತೋರಿತೆಂದು ಯಾರಾದರೂ ಯೋಚಿಸಿದ್ದರಾ?

ಮೊಣಕಾಲಿನ ಕೆಳಭಾಗದ ಮಾಂಸ ಪೇಶಿಯನ್ನು ರೋಸಿ ಕಚ್ಚಿ ಹಿಡಿದಳು. ಅವನು ಜೋರಾಗಿ ಬೊಬ್ಬಿಟ್ಟ. ರೋಸಿಯ ಹರಿತವಾದ ಹಲ್ಲುಗಳಿಂದ ಸಂರಕ್ಷಿಸಿಕೊಳ್ಳುವುದು ಅಷ್ಟು ಸುಲಭವಾಗಿರಲಿಲ್ಲ. ಅಷ್ಟರಲ್ಲಿ ಅಪ್ಪ, ಅಮ್ಮ, ಸಹೋದರಿ ಅಡುಗೆಯವನು ಎಲ್ಲರೂ ಘಟನೆ ನಡೆದ ಸ್ಥಳಕ್ಕೆ ಬಂದರು. ರೋಸಿ ಕಡಿತ ಬಿಟ್ಟಳು. ಉಪಾಯವಾಗಿ ದೂರ ಸರಿದಳು.

"ಅಯ್ಯಮ್ಮಾ... ನನ್ನ ಕಾಲು... ಹೇ..."

ಕುಟ್ಟ ರಕ್ತ ಸುರಿಯುವ ಗಾಯವನ್ನು ನೋಡಿ ಅರಚಾಡಿದ.

"ಅಯ್ಯೋ ದೇವರೇ... ನಾಯಿ ಕಚ್ಚಿತು..."

ಆ ದರಿದ್ರನಾಯಿ ಜನರನ್ನು ಕಚ್ಚಬಹುದೆಂದು ಯಾರಾದರೂ ಊಹಿಸಿದ್ದರೋ...